

ಎಂದವನೇ ತನ್ನ ಸೇವಕನಿಗೆ, ‘ನಮ್ಮಿಬ್ಬರಿಗೂ ಊಟದ ಏರ್ಪಾಟು ಮಾಡು’ ಎಂದು ಆದೇಶಿಸಿದ. ಊಟ ಮುಗಿಯುತ್ತಿದ್ದಂತೆಯೇ ಜಮೀನುದಾರ, ‘ನೋಡಯ್ಯಾ, ನಾನು ನಿನಗೆ ಮೂರು ಬೆಳ್ಳಿಯ ಬಟ್ಟಲುಗಳನ್ನು ಕೊಡುತ್ತೇನೆ. ನಿನ್ನ ಬಳಿ ಇರುವ ಚಿನ್ನದ ಗರಿಯನ್ನು ನನಗೆ ಕೊಡು’ ಎಂದ. ರೈತ, ‘ಅಯ್ಯೋ ಸ್ವಾಮಿ! ನನ್ನ ಬಳಿ ಯಾವ ಚಿನ್ನವೂ ಇಲ್ಲ. ನನಗೆ ಕಿರೀಟಕ್ಕೆ ಚಿನ್ನದ ಗರಿ ಹಾಕಿಸಲು ಎಷ್ಟು ಖರ್ಚಾಗುತ್ತದೆ ಎಂದು ತಿಳಿದುಕೊಳ್ಳಬೇಕಿತ್ತು, ಅದಕ್ಕೇ ಕೇಳಿದೆ, ಅಷ್ಟೆ’ ಎಂದ. ಜಮೀನುದಾರ ಹತಾಶೆ ಮತ್ತು ಕೋಪದಿಂದ, ‘ಅಯ್ಯೋ ಮೂರ್ಖ! ನಿನ್ನ ಬಳಿ ಚಿನ್ನ ಇಲ್ಲವೆ?’ ಎಂದು ರೇಗಿದ. ‘ಮಹಾಸ್ವಾಮಿ, ನನ್ನ ಬಳಿ ಕಿರೀಟವೂ ಇಲ್ಲ, ಚಿನ್ನದ ಗರಿಯೂ ಇಲ್ಲ. ಆದರೆ, ಕಿರೀಟಕ್ಕೆ ಚಿನ್ನದ ಗರಿ ಹಾಕಿಸಲು ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕಿತ್ತು... ಅದಕ್ಕೇ ಕೇಳಿದೆ, ಕ್ಷಮಿಸಿ.’ ಎಂದು ಹೇಳಿ ರೈತ ಅಲ್ಲಿಂದ ಎದ್ದು ಬಂದ. ಅಲ್ಲೇ ನಿಂತಿದ್ದ ಜಮೀನುದಾರನ ಗೆಳೆಯ ಸಾಹುಕಾರನನ್ನು ನೋಡಿದ ರೈತ, ‘ಸ್ವಾಮಿ, ಮೂರು ಎತ್ತುಗಳನ್ನು ಮನೆಗೆ ಕಳುಹಿಸಿಕೊಡಿ’ ಎಂದ.